**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರ**

**ಅಪರಾಧ ಮೊಕದ್ದಮೆ ಸಂಖ್ಯೆ : 5/2021**

ಪಿರ್ಯಾದಿ : ಪಿ.ಎಸ್.ಐ., ಸವಣೂರ ಪಿ.ಎಸ್.

**ವಿರುದ್ಧ**

ಆರೋಪಿತರು : ನಾಗಯ್ಯಾ ತಂದೆ ತಿರಕಯ್ಯಾ ಹಿರೇಮಠ,
ವಯಸ್ಸು : 40 ವರ್ಷ, ಉದ್ಯೋಗ : ಚಾಲಕ,
ಸಾ : ತೆಗ್ಗಿಹಳ್ಳಿ, ತಾ : ಸವಣೂರ,
ಜಿ : ಹಾವೇರಿ.

## ಆಪಾದನೆ

ಆರೋಪಿಯಾದ ನೀನು ದಿನಾಂಕ : 05.09.2020 ರಂದು 19.45 ಗಂಟೆ ಸುಮಾರಿಗೆ ಸೋನಾಲಿಕಾ ಕಂಪನಿಯ ಟ್ರ್ಯಾಕ್ಟರ ಇಂಜಿನ ನಂಬರ ಕೆ.ಎ.27/ಟಿಸಿ.2771 ನೇದ್ದಕ್ಕೆ ಡಾಂಬರ ಬಾಯಲರನ್ನು ಜೋಡಿಸಿಕೊಂಡು ಲಕ್ಷ್ಮೇಶ್ವರ ನಾಕಾ ಕಡೆಯಿಂದಾ ಸವಣೂರ ಶಹರದ ಬಸ್ಟ್ಯಾಂಡ ಕಡೆಗೆ ಅತೀಜೋರು ವ ನಿರ್ಲಕ್ಷ್ಯತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದು ಲಕ್ಷ್ಮೇಶ್ವರ ನಾಕಾ ಕಡೆಯಿಂದ ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಹೊರಟಿದ್ದ ಆಫ್ರೀನ್ ಬಾನು ಇವಳಿಗೆ ಡಾಂಬರ ಬಾಯಲರನ್ನು ಬಡಿಸಿ ಅಪಘಾತ ಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.279 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಿರಿರೆಂದು ಆಪಾದಿಸಲಾಗಿದೆ.

ಕೊನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಸೋನಾಲಿಕಾ ಕಂಪನಿಯ ಟ್ರ್ಯಾಕ್ಟರ ಇಂಜಿನ ನಂಬರ ಕೆ.ಎ.27/ಟಿಸಿ.2771 ನೇದ್ದಕ್ಕೆ ಡಾಂಬರ ಬಾಯಲರನ್ನು ಜೋಡಿಸಿಕೊಂಡು ಲಕ್ಷ್ಮೇಶ್ವರ ನಾಕಾ ಕಡೆಯಿಂದಾ ಸವಣೂರ ಶಹರದ ಬಸ್ಟ್ಯಾಂಡ ಕಡೆಗೆ ಅತೀಜೋರು ವ ನಿರ್ಲಕ್ಷ್ಯತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದು ಲಕ್ಷ್ಮೇಶ್ವರ ನಾಕಾ ಕಡೆಯಿಂದ ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಹೊರಟಿದ್ದ ಆಫ್ರೀನ್ ಬಾನು ಇವಳಿಗೆ ಡಾಂಬರ ಬಾಯಲರನ್ನು ಬಡಿಸಿ ರಸ್ತೆಯ ಮೇಲೆ ಕೆಡವಿ ನಂತರ ಡಾಂಬರ ಬೈಲರದ ಗಾಲಿಯನ್ನು ಅವಳ ಎಡಗಡೆ ತೊಡೆಯ ಮೇಲೆ ಹತ್ತಿಸಿ ಅಪಘಾತ ಮಾಡಿ ಅವಳ ಗದ್ದಕ್ಕೆ, ಹಲ್ಲಿಗೆ, ಎಡಗಾಲ ತೊಡೆಯ ಹತ್ತಿರ ಬಲವಾದ ರಕ್ತಗಾಯ ಪಡಿಸಿದ್ದು ನಂತರ ಆಫ್ರೀನ ಬಾನು ಸರಕಾರಿ ಆಸ್ಪತ್ರೆ ಸವಣೂರದಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಉಪಚಾರಕ್ಕೆ ಹುಬ್ಬಳ್ಳಿ ಕೀಮ್ಸ ಆಸ್ಪತ್ರೆಯಲ್ಲಿ ದಾಖಲಾಗಿದ್ದ

ಕಾಲಕ್ಕೆ ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ : 05.09.2020 ರಂದು 21.46 ಗಂಟೆಗೆ ಮೃತ ಪಡುವಂತೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.304(ಎ) ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಿರಿರೆಂದು ಆಪಾದಿಸಲಾಗಿದೆ.

(ಶ್ರೀ. ಶ್ರೇಯಾಂಶ ದೊಡ್ಡಮನಿ)
ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ಗಳು, ಸವಣೂರ.

## ಆರೋಪಿಯ ಉತ್ತರ

ಪ್ರಶ್ನೆ 1 : ಈಗ ನಿನಗೆ ಓದಿ ಹೇಳಿದ ಆಪಾದನೆಯ ಸಾರಾಂಶ ತಿಳಿಯಿತೇ ?
ಉತ್ತರ :

ಪ್ರಶ್ನೆ 2 : ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೋ ?
ಉತ್ತರ :

(ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣಿಕರಿಸುತ್ತೇನೆ)

ದಿನಾಂಕ : ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ಗಳು, ಸವಣೂರ.

ಆರೋಪಿತರ ಸಹಿ